# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 109 (97) |
| **ಸದಸ್ಯರ ಹೆಸರು** | : | ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 17.08.2026 |
| **ಉತ್ತರಿಸುವ ಸಚಿವರು** | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ವಿವರ |
|---|---|---|
| ಅ) | ಸರ್ಕಾರ ಇತ್ತೀಚೆಗೆ ಖಾಸಗಿ ಅನುದಾನಿತ ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ನಿವೃತ್ತಿ ಹಾಗೂ ಇತರ ಕಾರಣಗಳಿಂದ ಖಾಲಿ ಇರುವ ಹುದ್ದೆಗಳನ್ನು ತುಂಬಿಕೊಳ್ಳಲು ಯಾವ ವರ್ಷದಿಂದ ಯಾವ ವರ್ಷದವರೆಗೆ ಅನುಮತಿ ನೀಡಲಾಗಿದೆ: (ಮಾಹಿತಿ ಒದಗಿಸುವುದು) | ಆದೇಶ ಸಂಖ್ಯೆ: ಇಡಿ 14 ಎಸ್ಇಪಿ 2017, ದಿನಾಂಕ: 25.09.2018 ರಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ದಿನಾಂಕ: 31.12.2015ರವರೆಗೆ ನಿಧನ, ನಿವೃತ್ತಿ, ರಾಜೀನಾಮೆ ಮತ್ತು ಇತರೆ ಕಾರಣಗಳಿಂದ ಖಾಲಿಯಾದ ಬೋಧಕ (ಸಹ ಶಿಕ್ಷಕ ವೃಂದ) ಹಾಗೂ ದೈಹಿಕ ಶಿಕ್ಷಣ ಶಿಕ್ಷಕ (ಗ್ರೇಡ್-1) ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಸಲಾಗಿದೆ;<br><br>ಮುಂದುವರೆದು, ಆದೇಶ ಸಂಖ್ಯೆ: ಇಪಿ 396 ಎಸ್ಇಎಸ್ 2021, ದಿನಾಂಕ: 07.08.2024ರಲ್ಲಿ 1994-95 ರ ಶೈಕ್ಷಣಿಕ ಅವಧಿಗೆ ಪೂರ್ವದಲ್ಲಿ ಪ್ರಾರಂಭಗೊಂಡು ಈಗಾಗಲೇ ವೇತನಾನುದಾನಕ್ಕೆ ಒಳಪಟ್ಟ ಖಾಸಗಿ ಅನುದಾನಿತ ಪ್ರೌಢಶಾಲೆಗಳು, ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ:01.01.2016 ರಿಂದ ದಿನಾಂಕ:31.12.2020 ರವರೆಗೆ ನಿವೃತ್ತಿ, ನಿಧನ, ರಾಜೀನಾಮೆ ಹಾಗೂ ಮತ್ತಿತರ ಕಾರಣಗಳಿಂದ ಖಾಲಿಯಾಗಿರುವ ಬೋಧಕ ಹುದ್ದೆಗಳನ್ನು ಹಲವು ಷರತ್ತಿಗಳಿಗೊಳಪಟ್ಟು ಭರ್ತಿ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ. |
| ಆ) | ರಾಜ್ಯದ ವಿವಿಧ ಜಿಲ್ಲೆಗಳಿಂದ ಎಷ್ಟು ಆಡಳಿತ ಮಂಡಳಿಗಳು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡುವಂತೆ ಆನ್‌ಲೈನ್ ಮೂಲಕ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ: ಜಿಲ್ಲಾವಾರು ಮಾಹಿತಿ ನೀಡುವುದು ಮತ್ತು ಇವುಗಳಲ್ಲಿ ಎಷ್ಟು ಆಡಳಿತ ಮಂಡಳಿಗಳಿಗೆ ಹುದ್ದೆ ತುಂಬಿಕೊಳ್ಳಲು ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಅನುಮತಿ ನೀಡಲಾಗಿದೆ: (ವಿವರವಾದ ಮಾಹಿತಿ ನೀಡುವುದು) | ರಾಜ್ಯದ ವಿವಿಧ ಜಿಲ್ಲೆಗಳಿಂದ ಅನುದಾನಿತ ಶಾಲೆಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ಕೋರಿ, ಶಾಲಾ ಆಡಳಿತ ಮಂಡಳಿಗಳಿಂದ ಒಟ್ಟು 181 ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ.<br><br>ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ದಿನಾಂಕ: 01-01-2016 ರಿಂದ 31-12-2020ರ ಅವಧಿಯವರೆಗೆ ಖಾಲಿ ಇರುವ ಹುದ್ದೆಗಳನ್ನು ತುಂಬಿಕೊಳ್ಳಲು ಈಗಾಗಲೇ ತಂತ್ರಾಂಶವನ್ನು ಸಿದ್ಧಪಡಿಸಲಾಗಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಬಿ.ಇ.ಓ ಹಂತ (ಮೊದಲನೇ ಹಂತ) ಮುಗಿದಿರುತ್ತದೆ ಹಾಗೂ ಶಾಲಾ ಆಡಳಿತ ಮಂಡಳಿಯವರ ಇಂಧೀಕರಣ ಕಾರ್ಯ (ಎರಡನೇ ಹಂತ) ಚಾಲ್ತಿಯಲ್ಲಿರುತ್ತದೆ. |

| | | |
|---|---|---|
| | | ದಿನಾಂಕ: 08.05.2026 ರಂದು ಸಮಾಜ ಕಲ್ಯಾಣ ಇಲಾಖೆಯು ಹೊರಡಿಸಿರುವ ಆದೇಶ ಸಂಖ್ಯೆ: ಸಕಇ 515 ಪಕವಿ 2026 ರಂತೆ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾದ ರಿಕ್ತ ಸ್ಥಾನಗಳಿಗೆ ಅನುರಿಸಬೇಕಾದ 400 ಬಿಂದುಗಳ ರೋಸ್ಟರಂತೆ ವಿವಿಧ ನೇಮಕಾತಿ / ಆಯ್ಕೆ ಪ್ರಾಧಿಕಾರಗಳು ನೇರ ನೇಮಕಾತಿ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಸಿಆಸು ಇಲಾಖೆಯು ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026, ದಿನಾಂಕ: 13.05.2026ರಲ್ಲಿ ತಿಳಿಸಿದ್ದು, ಅದರನ್ವಯ ಕ್ರಮವಹಿಸುವಂತೆ ಎಲ್ಲಾ ನೇಮಕಾತಿ / ಆಯ್ಕೆ ಪ್ರಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ. ಈ ಆದೇಶದಲ್ಲಿ ಸೂಚಿಸಿರುವ ಕ್ರಮಗಳನ್ವಯ ತಂತ್ರಾಂಶವನ್ನು ಮಾರ್ಪಡಿಸುವುದರೊಂದಿಗೆ ಸದರಿ ಪ್ರಸ್ತಾವನೆಗಳನ್ನು ತಂತ್ರಾಂಶದ ಮೂಲಕ ಸಹ ನಿರ್ದೇಶಕರನ್ನೊಗೊಂಡ ಸಮಿತಿಗೆ ಸಲ್ಲಿಸಲು ಆಯುಕ್ತಾಲಯವು ಕ್ರಮವಹಿಸುತ್ತಿದೆ. |
| ಇ) | ರಾಜ್ಯದ ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ನಿವೃತ್ತಿಯಿಂದ ಖಾಲಿಯಾಗಿರುವ ಹುದ್ದೆಗಳನ್ನು ತುಂಬಿಕೊಳ್ಳಲು ಸರ್ಕಾರ ಅನುಮತಿ ನೀಡದೇ ಇರುವುದು ನಿಜವೇ; ಹಾಗಿದ್ದಲ್ಲಿ, ಯಾವ ಕಾರಣಕ್ಕಾಗಿ ಅನುಮತಿ ನೀಡಿರುವುದಿಲ್ಲ; (ವಿವರ ನೀಡುವುದು) | ರಾಜ್ಯದಲ್ಲಿರುವ ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಈಗಾಗಲೇ ಹೆಚ್ಚುವರಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿರುತ್ತಾರೆ.<br><br>ಆದ್ದರಿಂದ, ಹೆಚ್ಚುವರಿ ಅನುದಾನಿತ ಹುದ್ದೆಗಳು ಖಾಲಿಯಾದಲ್ಲಿ ಅಥವಾ ಒಂದು ಖಾಸಗಿ ಪ್ರಾಥಮಿಕ ಶಾಲೆಯನ್ನು ಸಹಾಯಾನುದಾನಕ್ಕೆ ಒಳಪಡಿಸಿದ ಪ್ರಥಮ ಸಂದರ್ಭದಲ್ಲಿ ಕೆಲವು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸದೇ ಉಳಿದಿದ್ದಲ್ಲಿ, ಅಂತಹ ಖಾಲಿ ಹುದ್ದೆಗಳನ್ನು ಹೆಚ್ಚುವರಿ ಶಿಕ್ಷಕರುಗಳಿಂದ ಮಾತ್ರ ತುಂಬಿಕೊಳ್ಳಬೇಕೇ ಹೊರತು, ನೇರ ನೇಮಕಾತಿ ಮಾಡಿಕೊಳ್ಳತಕ್ಕದಲ್ಲ, ಎಂಬುದಾಗಿ ಸರ್ಕಾರದಿಂದ ಸುತ್ತೋಲೆ ಸಂಖ್ಯೆ: ಇಡಿ 267 ಪಿಎಂಸಿ 2007, ದಿನಾಂಕ: 12.10.2007ರಲ್ಲಿ ಸೂಚಿಸಲಾಗಿದೆ. |
| ಈ) | ರಾಜ್ಯದ ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಹುದ್ದೆ ತುಂಬಿಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಕಾಲೇಜುಗಳಿಂದ ಹುದ್ದೆ ತುಂಬಿಕೊಳ್ಳಲು ಅನುಮತಿ ಕೇಳಿ ಪ್ರಸ್ತಾವನೆಗಳು ಬಂದಿವೆ; ಈ ವಿಷಯಕ್ಕೆ ಸಂಬಂಧಿಸಿದಂತೆ ಹುದ್ದೆ ತುಂಬಿಕೊಳ್ಳಲು ಅನುಮತಿ ನೀಡುವಲ್ಲಿ ಯಾವುದಾದರೂ ಸಮಸ್ಯೆಗಳಿವೆಯೇ? (ಮಾಹಿತಿಯೊಂದಿಗೆ ವಿವರ ನೀಡುವುದು) | ಪ್ರಸ್ತುತ ಆದೇಶ ಸಂಖ್ಯೆ: ಇಪಿ 03 ಟಿಪಿಯು 2023, ದಿನಾಂಕ: 19.02.2025 ರನ್ವಯ ದಿನಾಂಕ 31-12-2015 ರವರೆಗೆ ವಿವಿಧ ಕಾರಣಗಳಿಂದ ತೆರವಾದ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ನಿಗದಿತ ಕಾರ್ಯಭಾರವಿರುವ ಬೋಧಕ ಹುದ್ದೆಗಳಿಗೆ ಆರ್ಥಿಕ ಮಿತವ್ಯಯವನ್ನು ಸಡಿಲಿಸಿ ಒಟ್ಟು 1036 ಬೋಧಕ ಹುದ್ದೆಗಳನ್ನು ತುಂಬಲು ಅವಕಾಶ ಕಲ್ಪಿಸಲಾಗಿದೆ.<br><br>ಅದರಂತೆ ಇಲಾಖೆಯು ಆಡಳಿತ ಮಂಡಳಿಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸರ್ಕಾರ/ಇಲಾಖೆ ನಿಗಧಿಪಡಿಸಿರುವ ಮಾನದಂಡಗಳಾದ ನಿಗಧಿತ ಕಾರ್ಯಭಾರ, ದಾಖಲಾತಿ, ಫಲಿತಾಂಶ, ಆಡಳಿತ |

| | | |
|---|---|---|
| | | ಮಂಡಳಿ ವ್ಯಾಪ್ತಿ ಹೊಂದಿರದ ಹಾಗೂ ಇತರೆ ಮಾನದಂಡಗಳನ್ನು ಪೂರೈಸುವ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಅನುಮತಿ ನೀಡಲಾಗುತ್ತಿದೆ.<br><br>ದಿನಾಂಕ: 31.12.2015ರ ಪೂರ್ವದಲ್ಲಿ ತೆರವಾಗಿರುವ ಹುದ್ದೆಗಳಲ್ಲಿ ಸರ್ಕಾರದಿಂದ ಭರ್ತಿ ಮಾಡಲು 1036 ಬೋಧಕ ಹುದ್ದೆಗಳಿಗೆ ಅವಕಾಶ ಕಲ್ಪಿಸಿದ್ದು, ಈ ಪೈಕಿ ಒಟ್ಟು 468 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ.<br><br>ಆದೇಶ ಸಂಖ್ಯೆ: ಇಪಿ 396 ಟಿಪಿಯು 2021, ದಿನಾಂಕ: 07.08.2024 ರನ್ವಯ ದಿನಾಂಕ: 01.01.2016 ರಿಂದ ದಿನಾಂಕ: 31.12.2020 ರವರೆಗೆ ಖಾಲಿ ಇರುವ ಬೋಧಕ ಹುದ್ದೆಗಳನ್ನು ಸರ್ಕಾರದ ಆದೇಶದಲ್ಲಿ ವಿಧಿಸಿರುವ ಷರತ್ತಿಗೆ ಒಳಪಟ್ಟು ಭರ್ತಿ ಮಾಡಲು ಅನುಮತಿ ನೀಡಲಾಗಿರುತ್ತದೆ. ಸದರಿ ಆದೇಶದ ಪ್ರಕಾರ ಹುದ್ದೆಗಳನ್ನು ಭರ್ತಿ ಪ್ರಕ್ರಿಯೆಯನ್ನು ಆನ್-ಲೈನ್‌ನಲ್ಲಿ ಮಾಡಲು ಆದೇಶಿಸಿದ್ದು, ಅದರ ಪ್ರಕಾರ ಖಾಲಿ ಹುದ್ದೆಗಳ ಮಾಹಿತಿಯನ್ನು ಕಾಲೇಜುಗಳಿಂದ ಹಾಗೂ ಜಿಲ್ಲಾ ಉಪನಿರ್ದೇಶಕರಿಂದ ಪರಿಶೀಲಿಸುವ ಕಾರ್ಯ ಪ್ರಗತಿಯಲ್ಲಿದೆ ಹಾಗೂ ಹುದ್ದೆ ಭರ್ತಿಗೆ ಅನುಮತಿ ನೀಡುವ ಪ್ರಕ್ರಿಯೆಗೆ ಆನ್-ಲೈನ್‌ನಲ್ಲಿ ಪ್ರಸ್ತಾವನೆಯನ್ನು ಇಂದಿಕರಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ: ಇಪಿ 249 ಎಸ್‌ಇಎಸ್ 2026**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು